ಶ್ರೀ ಜಿ.ಬಸವಣ್ಣೆಪ್ಪ: ಗ್ರಾಮಾಂತರ ಪ್ರದೇಶದಲ್ಲಿ ಗ್ರೀನ್ ಕಾರ್ಡ್ ಏನಿದೆ, ಭಾವಚಿತ್ರ ಇರಬೇಕೆಂದು ಹೇಳಿದ್ದೇವೆ. ಕಾರ್ಡ್‌ನ್ನು ವಾಪಸ್ ತೆಗೆದುಕೊಂಡಾಗ ಒಂದು ಐಡೆಂಟಿಫಿಕೇಷನ್ ಕಾರ್ಡ್ ಕೊಟ್ಟಿದ್ದಾರೆ. ಅಂದರೆ, ನಿಮ್ಮ ಕಾರ್ಡ್ ಅಲ್ಲಿ ಕೊಡುವವರೆಗೂ ಆ ಸ್ಲಿಪ್‌ನಲ್ಲಿ ನೀವು ಆಹಾರಧಾನ್ಯವನ್ನು ತೆಗೆದುಕೊಳ್ಳಬಹುದು. ಈಗ ಆ ಕಾರ್ಡ್‌ನ್ನು ಕೊಡುತ್ತಿದ್ದಾರೆ. ಭಾವಚಿತ್ರ ಕೊಟ್ಟಮೇಲೆ ಕಾರ್ಡ್‌ನ್ನು ಕೊಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ: ಯಾವಾಗ ಕೊಟ್ಟಿರಿ? ಎಲ್ಲಿ ಕೊಟ್ಟಿರಿ? ಎಲ್ಲೂ ಇಲ್ಲ. ನಿಮ್ಮ ಗಮನಕ್ಕೆ ಬಂದಿದೆಯೋ, ಇಲ್ಲವೋ?

(ಗೊಂದಲ)

ಛೇರ್ಮನ್: ಚರ್ಚೆಯ ವಿಷಯ ಇರತಕ್ಕದ್ದು, ಆ ರೇಷನ್ ಕಾರ್ಡ್‌ಗೆ ದಂಡ ವಿಧಿಸತಕ್ಕದ್ದರ ಬಗ್ಗೆ. ತಾವು ಬೇರೆ ವಿಷಯಕ್ಕೆ ಹೋಗುತ್ತಿದ್ದೀರಿ. ಅದಷ್ಟಕ್ಕೆ ಮೊಟಕುಗೊಳಿಸಿ ಚಿಮ್ಮನಕಟ್ಟಿ.... ಮಾತನಾಡುತ್ತಾರೆ.

(ಗೊಂದಲ)

ಶ್ರೀ. ರೇವುನಾಯ್ಕ ಬೆಳಮಾಗಿ: ನನ್ನ ಗುಲ್ಬರ್ಗಾ ತಾಲ್ಲೂಕಿನ 662 ಜನರ ಕಾರ್ಡ್‌ಗಳನ್ನು ಫೋಟೋ ಇಲ್ಲವೆಂದು ರದ್ದುಗೊಳಿಸಿದ್ದಾರೆ. ಅವರು ಇನ್‌ಟೈನಲ್ಲಿ ಕೊಡಲಿಕ್ಕಾಗಲಿಲ್ಲ. ತಹಶೀಲ್ದಾರ್ ಮತ್ತು ಎ.ಸಿ.ಯವರು ಸರ್ಕಾರದಿಂದ ಆದೇಶ ಬರಬೇಕು, ನಮ್ಮ ಕೈಯಲ್ಲೇನೂ ಇಲ್ಲವೆಂದು ಹೇಳುತ್ತಿದ್ದಾರೆ. ಆದುದರಿಂದ, ಪುನಃ ಪರಿಶೀಲನೆ ಮಾಡಿ ಆ ಕಡುಬಡವರಿಗೆ, ದೀನ ದಲಿತರಿಗೆ ಕಾರ್ಡ್ ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಛೇರ್ಮನ್: ಲೇಟಾಗಿದ್ದಕ್ಕೆ ಕೊಡುತ್ತಿಲ್ಲ, ಅದನ್ನು ತಾವು ಕೊಡಿಸಬೇಕು. ಲೇಟಾಗಿದ್ದರಿಂದ ತಮ್ಮ ಕೈಯಲ್ಲಿಲ್ಲವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ನೀವು ಕೊಡಿಸಬೇಕು.

ಶ್ರೀ ಜಿ.ಬಸವಣ್ಣೆಪ್ಪ: ಆದಷ್ಟು ಬೇಗ ಅದನ್ನು ಸರಿಪಡಿಸುತ್ತೇನೆ.

(ಈ) ಮಲಪ್ರಭಾ ಎಡದಂಡೆ ಕಾಲುವೆಯು 5ನೇ ಕಿ.ಮೀ ಬಳಿ ಒಡೆದಿರುವುದರಿಂದ ರೈತರಿಗೆ ತೊಂದರೆ

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ನಾನು ಮಲಪ್ರಭಾ ಎಡದಂಡೆ ಕಾಲುವೆ ವಿಚಾರವನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಮಲಪ್ರಭಾ ಎಡದಂಡೆ ಕಾಲುವೆಯ 5ನೇ ಕಿ.ಮೀ.ನಲ್ಲಿ ಒಡೆದು, 3 ತಾಲ್ಲೂಕಿನ ರೈತರಿಗೆ ಬಹಳ ತೊಂದರೆಯಾಗಿದೆ.

1995-96ರಲ್ಲಿ ಒಡೆದ ಆ ಕಾಲುವೆಯನ್ನು ರಿಪೇರಿ ಮಾಡಿದರು. ಆವಾಗಲೂ ಕೂಡ, ಪೂರ್ತಿ ಕಾಲುವೆಯೊಳಗೆ ನೀರು ಬಿಡುವುದಕ್ಕಾಗಲೇ ಇಲ್ಲ. ತದನಂತರ, ಈ ವರ್ಷವೂ ಕೂಡ ನಿಗದಿತ ಅವಧಿಯೊಳಗೆ ಟೆಂಡರ್ ಕರೆದು, ಅದನ್ನು ಮುಗಿಸದಿದ್ದರಿಂದ, 3 ತಾಲ್ಲೂಕುಗಳೆಂದರೆ-ರಾಮದುರ್ಗ, ಬಾದಾಮಿ ಮತ್ತು ಸವದತ್ತಿ ರೈತರಿಗೆ ಇನ್ನೂವರೆಗೆ ನೀರು ಕೊಡುವುದಕ್ಕಾಗಲಿಲ್ಲ. ಆಗಸ್ಟ್ 15ರಂದು ಅದನ್ನು ಮುಗಿಸಬೇಕಾಗಿತ್ತು. ಏಪ್ರಿಲ್‌ನಲ್ಲಿ ಅದನ್ನು ರಿಪೇರಿ ಮಾಡುವ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದರು. ಇವತ್ತು 26ನೇ ತಾರೀಖು. ಈ 26ನೇ ತಾರೀಖಿನವರೆಗೂ ಸಹ ಕಾಲುವೆಯೊಳಗೆ ನೀರು ಹರಿಸುವುದಕ್ಕಾಗಲಿಲ್ಲ. ಇದರಿಂದ ಮೂರು ತಾಲ್ಲೂಕಿನ ರೈತರಿಗೆ ಅಪಾರ ಹಾನಿಯಾಗಿದೆ. ಬಹಳಷ್ಟು ತೊಂದರೆಯಾಗಿದೆ. ಆ ದೃಷ್ಟಿಯಿಂದ ಯಾವ ಅಧಿಕಾರಿಗಳು ನಿರ್ಲಕ್ಷ್ಯ ಮಾಡಿದ್ದಾರೆ, ಅವರ ಮೇಲೆ ಯಾವುದಾದರೊಂದು ಶಿಸ್ತಿನ ಕ್ರಮ ಕೈಗೊಂಡು, ರೈತರಿಗೆ ಆಗಿರುವ ತೊಂದರೆಯನ್ನು ನಿವಾರಿಸುವ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎನ್ನುವುದನ್ನು ದಯವಿಟ್ಟು ಹೇಳಬೇಕು.

ಶ್ರೀ ಕೆ.ಎನ್.ನಾಗೇಗೌಡ (ಭಾರೀ ನೀರಾವರಿ ಸಚಿವರು): ಮಾನ್ಯ ಛೇರ್ಮನ್‌ರವರೆ, 1996ನೇ ಇಸವಿಯ 10ನೇ ತಿಂಗಳ 18 ಮತ್ತು 27ನೇ ದಿವಸ ಭಾರೀ ಮಳೆ ಬಿದ್ದಿದ್ದರಿಂದ, ಮಲಪ್ರಭಾ 5ನೇ ಕಿ.ಮೀನಲ್ಲಿ, ಪ್ರವಾಹ ಬಂದು ಒಡೆದುಹೋಯಿತು. ತಮಗೆ ಗೊತ್ತಿರುವಂತೆ ಅದನ್ನು 1996-97ರಲ್ಲಿ ಸುಮಾರು 35ಲಕ್ಷ ರೂಪಾಯಿ ಸಿ.ಡಿ.ವರ್ಕ್ಸ್ ಅಂದರೆ ಮಾಸ್ ಕಾಂಕ್ರೀಟ್ ಪೈಪ್ ಕಲ್ವರ್ಟ್ ಎಂದು ಏನು ಹೇಳುತ್ತೇವೆ ಅದಕ್ಕೆ ಟೆಂಡರ್ ಕರೆದು 25ನೇ ತಾರೀಖಿನ ದಿವಸ ಅದು ಮುಗಿದಿದೆ. ಇವತ್ತು ಮಲಪ್ರಭಾ ಇರಿಗೇಷನ್ ಕನ್ಸಲ್ಟೇಟಿವ್ ಕಮಿಟಿ ಮೀಟಿಂಗ್ ನಡೆದಿದೆ. ಈ ಕನ್ಸಲ್ಟೇಟಿವ್ ಕಮಿಟಿ ಮೀಟಿಂಗ್‌ನಲ್ಲಿ 1,350 ಕ್ಯೂಸೆಕ್ಸ್ ನೀರು, ಮಲಪ್ರಭಾ ಎಡದಂಡೆ ನಾಲೆಗೆ ಹೋಗಬೇಕಾಗಿದೆ; ಇವತ್ತಿನ ದಿವಸ ಅವರು ಯಾವ ದಿನಾಂಕವನ್ನು ನಿಗದಿ ಮಾಡಿ ನೀರನ್ನು ಬಿಡಬೇಕೆಂದು ಹೇಳುತ್ತಾರೋ, ಆ ದಿನಾಂಕದಂದು ನೀರನ್ನು ಬಿಡುತ್ತೇವೆ. ಕೆಲಸವಂತೂ ನಿನ್ನೆಗೇ ಮುಗಿದಿದೆ ಎಂದು ನನಗೆ ವರ್ತಮಾನ ದೊರೆತಿದೆ.

(ಊ) ತೀರ್ಥಹಳ್ಳಿ ತಾಲ್ಲೂಕಿನ ತುಂಗಾನದಿಯಲ್ಲಿ ಸಿಗುವ ಮರಳನ್ನು ಪ್ರತಿ ದಿವಸ ಸಾಗಣೆಕೆ ಮಾಡುತ್ತಿರುವುದರಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟ,

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಛೇರ್ಮನ್‌ರವರೆ ತೀರ್ಥಹಳ್ಳಿ ತಾಲ್ಲೂಕಿನ ತುಂಗಾ ನದಿಯಲ್ಲಿ ಪ್ರಕೃತಿದತ್ತವಾಗಿ ಸಿಗುವ ಮರಳು ಬಹಳ ಉತ್ಕೃಷ್ಟವಾಗಿರತ್ತದೆಂದು ಹೇಳಿ, ಶಿವಮೊಗ್ಗ ಮತ್ತು ಭದ್ರಾವತಿ ನಗರಗಳಿಗೆ ಬಿಲ್ಡಿಂಗ್ ಕಟ್ಟಲಿಕ್ಕೋಸ್ಕರ ಈ ಮರಳು ವ್ಯಾಪಕವಾಗಿ ಹೋಗುತ್ತಿದೆ. ದಿನಕ್ಕೆ ಸುಮಾರು 200 ಲಾರಿಗಳಷ್ಟು ಮರಳು ಹೋಗುತ್ತಿದೆ. ನಮ್ಮ ಗಣಿ ಖಾತೆಯ ಭೂವಿಜ್ಞಾನಿಯೊಬ್ಬರು ಶಿವಮೊಗ್ಗದಲ್ಲಿದ್ದಾರೆ. ಇವರು ಗುತ್ತಿಗೆ ಕೊಡತಕ್ಕವರು. ಸುಮಾರು 4 ವರ್ಷಗಳಿಂದ